ವಿಜಯವಾಣಿ

# ಏ.18ರಿಂದ ಸಿಇಟಿ ಪರೀಕ್ಷೆ

## ಆಯುಷ್ ಕೋರ್ಸ್‌ಗಳಿಗೂ ನೀಟ್ ಪರೀಕ್ಷೆ

**ಬೆಂಗಳೂರು:** ಆಯುಷ್ ಕೋರ್ಸ್‌ಗಳಿಗೆ ಅಂತಿಮವಾಗಿ ನೀಟ್ ಪರೀಕ್ಷೆಯನ್ನೇ ನಡೆಸುವುದಾಗಿ ಕೇಂದ್ರ ಸರ್ಕಾರ ತಿಳಿಸಿದೆ. ಏ.18ರಿಂದ 20ರವರೆಗೆ ಕರ್ನಾಟಕ ಪರೀಕ್ಷಾ ಪ್ರಾಧಿಕಾರ(ಕೆಇಎ) ಸಿಇಟಿ ನಡೆಸಲಿದ್ದು, ಅರ್ಜಿ ಆಹ್ವಾನಿಸಲಾಗಿದೆ. ಕೆಇಎ ಆಯುಷ್ ಕೋರ್ಸ್‌ಗಳಿಗೆ ಸಿಇಟಿ ನಡೆಸಬೇಕೋ ಅಥವಾ ಕೇಂದ್ರವೇ ನೀಟ್ ನಡೆಸುವುದೋ ಎಂಬ ಗೊಂದಲವಿತ್ತು. ರಾಜ್ಯ ಸರ್ಕಾರ ಕೂಡ ಇತ್ತೀಚೆಗೆ ಅಧಿಸೂಚನೆ ಹೊರಡಿಸುವ ಮೂಲಕ 2018-19ನೇ ಸಾಲಿನಿಂದ ನೀಟ್ ಜಾರಿಯಾಗಲಿದೆ ಎಂದು ಸ್ಪಷ್ಟಪಡಿಸಿತ್ತು. ಈಗಾಗಲೇ ವೈದ್ಯಕೀಯ ಮತ್ತು ದಂತ ವೈದ್ಯಕೀಯ ಕೋರ್ಸ್‌ಗಳ ಪ್ರವೇಶಕ್ಕೆ ಸಿಬಿಎಸ್ಇ ನೀಟ್ ನಡೆಸುತ್ತಿದ್ದು, ಇನ್ನು ಮುಂದೆ ಆಯುಷ್ ಕೋರ್ಸ್ ಕೂಡ ಸೇರಲಿದೆ. ಆದರೆ, ಕೆಇಎ ನೀಟ್ ರ‍್ಯಾಂಕ್ ಆಧಾರದ ಮೇಲೆ ಸೀಟು ಹಂಚಿಕೆ ಮಾಡಲಿದೆ. ಏ.18ರಿಂದ 20ರವರೆಗೆ ಕೆಇಎ ಸಿಇಟಿ ನಡೆಸಲಿದ್ದು, ಇದಕ್ಕಾಗಿ ಅರ್ಜಿ ಆಹ್ವಾನಿಸಿದೆ. ಅರ್ಜಿ ಸಲ್ಲಿಸಲು ಫೆ.26, ಬ್ಯಾಂಕುಗಳಲ್ಲಿ ಶುಲ್ಕ ಪಾವತಿಸಲು ಫೆ.28 ಕೊನೆಯ ದಿನ. ಪ್ರವೇಶಪತ್ರ ಡೌನ್‌ಲೋಡ್ ಮಾಡಿಕೊಳ್ಳಲು ಏ.10ರವರೆಗೆ ಅವಕಾಶ ಕಲ್ಪಿಸಿದೆ. ಹೆಚ್ಚಿನ ಮಾಹಿತಿಗೆ http://kea.kar.nic.in/ ನೋಡಬಹುದು.